☎ 0836 - 2224098, 2224195
2224301, 2222616
2224274, 2222505

# ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ,

Vinyas Final MVB

**ನವನಗರ, ಹುಬ್ಬಳ್ಳಿ - 580 025.**

ಕ್ರ.ಸಂ.: ಹು.ಧಾ.ನ.ಪ್ರಾ: ಯೋ.ವಿ/ವಿನ್ಯಾಸ/69/2025-26 / 1210 ದಿನಾಂಕ : 22-05-2026

ಇವರಿಗೆ,

**ಮೆ|| ಸ್ಕೈಟಾನ ಪ್ರಾಪರ್ಟಿಸ್ ಪ್ರೈವೇಟ್ ಲಿಮಿಟೆಡ್ ಇದರ ತರ್ಫೆ**

**ಡೈರೆಕ್ಟರ್ಸಗಳಾದ ಶ್ರೀ ಚೇತನ ಎಸ್ ಪವಾರ, ಶ್ರೀ ಕೇದಾರ ಶ್ಯಾಮ ಹಬೀಬ ಹಾಗೂ ಇತರರು**

**# 108, 109 ಮೊದಲನೇ ಮಹಡಿ, ಮಾರ್ವೆಲ್ ಸಿಗ್ನೇಟ, ಶಿರೂರ ಪಾರ್ಕ, ವಿದ್ಯಾನಗರ, ಹುಬ್ಬಳ್ಳಿ-580031**

ಮಾನ್ಯರೇ,

ವಿಷಯ: **ಹುಬ್ಬಳ್ಳಿ** ತಾಲೂಕ **ರೇವಡಿಹಾಳ** ಗ್ರಾಮದ ರಿ.ಸ.ನ/ಬ್ಲಾಕ್ ನಂ. **1/1ಅ ಕ್ಷೇತ್ರ 05ಎಕರೆ-19ಗುಂಟೆ ಪೈಕಿ (01ಗುಂಟೆ 'ಅ' ಖರಾಬ ಹೊರತುಪಡಿಸಿ) ಪೈಕಿ 02ಎಕರೆ-12ಗುಂಟೆ+37ಗುಂಟೆ ಹಾಗೂ 1/2 ಕ್ಷೇತ್ರ 02ಎಕರೆ-16ಗುಂಟೆ ಪೈಕಿ (13ಗುಂಟೆ 'ಅ' ಖರಾಬ ಹೊರತುಪಡಿಸಿ) ಪೈಕಿ 02ಎಕರೆ-15ಗುಂಟೆ-08ಆಣೆ+05ಗುಂಟೆ** ಒಟ್ಟುಕ್ಷೇತ್ರ **05ಎಕರೆ-29ಗುಂಟೆ-08ಆಣೆ** ಪ್ರದೇಶವನ್ನು **ವಸತಿ** ಉದ್ದೇಶಕ್ಕಾಗಿ ತಾತ್ಕಾಲಿಕ ವಿನ್ಯಾಸ ಅನುಮೋದನೆ ನೀಡುವ ಕುರಿತು.

ಉಲ್ಲೇಖ: 1) ಅರ್ಜಿದಾರರ ಮನವಿ ದಿನಾಂಕ: 24-09-2025

2) ಮಾನ್ಯ ಜಿಲ್ಲಾಧಿಕಾರಿಗಳು, ಆದೇಶ ಸಂಖ್ಯೆ:516583 ದಿನಾಂಕ:08-09-2023 & 542894 ದಿನಾಂಕ:12-10-2023

3) ಪ್ರಾಧಿಕಾರದ ಸಭೆಯ ದಿನಾಂಕ:19-11-2025 ರ ವಿಷಯ ನಂ.36(15) ರ ತೀರ್ಮಾನ

4) ಶುಲ್ಕ ತುಂಬಿದ ಚಲನ ನಂ. 3463, 2422 ಹಾಗೂ 4715 ದಿನಾಂಕ: 09-01-2026

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **ಹುಬ್ಬಳ್ಳಿ** ತಾಲೂಕ **ರೇವಡಿಹಾಳ** ಗ್ರಾಮದ ರಿ.ಸ.ನ/ಬ್ಲಾಕ್ ನಂ. **1/1ಅ ಕ್ಷೇತ್ರ 05ಎಕರೆ-19ಗುಂಟೆ ಪೈಕಿ (01ಗುಂಟೆ 'ಅ' ಖರಾಬ ಹೊರತುಪಡಿಸಿ) ಪೈಕಿ 02ಎಕರೆ-12ಗುಂಟೆ+37ಗುಂಟೆ ಹಾಗೂ 1/2 ಕ್ಷೇತ್ರ 02ಎಕರೆ-16ಗುಂಟೆ ಪೈಕಿ (13ಗುಂಟೆ 'ಅ' ಖರಾಬ ಹೊರತುಪಡಿಸಿ) ಪೈಕಿ 02ಎಕರೆ-15ಗುಂಟೆ-08ಆಣೆ+05ಗುಂಟೆ** ಒಟ್ಟುಕ್ಷೇತ್ರ **05ಎಕರೆ-29ಗುಂಟೆ-08ಆಣೆ** ಪ್ರದೇಶವನ್ನು **ವಸತಿ** ಉದ್ದೇಶಕ್ಕಾಗಿ ತಾತ್ಕಾಲಿಕ ವಿನ್ಯಾಸ ಅನುಮೋದನೆ ನೀಡುವ ಕುರಿತು ಉಲ್ಲೇಖ (1) ರಲ್ಲಿ ಮನವಿ ಸಲ್ಲಿಸಿರುತ್ತೀರಿ. ಉಲ್ಲೇಖ (2) ರನ್ವಯ ಮಾನ್ಯ ಜಿಲ್ಲಾಧಿಕಾರಿಗಳು ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಮಾಹಿತಿ ಮತ್ತು ದಾಖಲೆಗಳನ್ನು ಪರಿಶೀಲಿಸಿ, ಉಲ್ಲೇಖ (3) ರ ಪ್ರಾಧಿಕಾರದ ಸಭೆಯಲ್ಲಿ ಸದರಿ ಜಮೀನಿಗೆ ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸಲು ತೀರ್ಮಾನಿಸಲಾಗಿದೆ. ಪ್ರಸ್ತಾಪಿತ ವಿನ್ಯಾಸ ನಕ್ಷೆಯನ್ನು ಮಹಾಯೋಜನೆ ಪರಿಷ್ಕೃತ-IIನ್ನು ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಲಾಗಿದೆ. ಉಲ್ಲೇಖ (4) ರನ್ವಯ, ಅರ್ಜಿದಾರರು ನಿಗದಿ ಪಡಿಸಿದ ಶುಲ್ಕವನ್ನು ಪಾವತಿಸಿರುತ್ತಾರೆ. ಆದ್ದರಿಂದ ಸದರಿ ಜಮೀನಿಗೆ ಕೆಟಿಸಿಪಿ ತಿದ್ದುಪಡೆ ಕಾಯ್ದೆ ಕಲಂ 17(2ಎ) ರನ್ವಯ ಕರಡು ತಾತ್ಕಾಲಿಕ ವಸತಿ ವಿನ್ಯಾಸಕ್ಕೆ ಕೆಳಕಂಡ ಷರತ್ತುಗಳಿಗೆ ಅನುಗುಣವಾಗಿ ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ.

1) ಸದರಿ ಮಂಜೂರಾತಿಯು ವಿನ್ಯಾಸ ಅನುಮೋದನೆಗೊಂಡ ದಿನಾಂಕದಿಂದ ಮೂರು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸ ಅಭಿವೃದ್ಧಿ ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ನವೀಕರಿಸಿಕೊಳ್ಳಬೇಕು.

2) ವಿನ್ಯಾಸದಲ್ಲಿ ಹಾಲಿ ಇರತಕ್ಕ ಗಿಡಮರಗಳನ್ನು ಉಳಿಸಿಕೊಂಡು, ಮುಖ್ಯ ರಸ್ತೆಗಳ ಎರಡು ಕಡೆ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮ ಕೈಕೊಳ್ಳಬೇಕು.

3) ಅನುಮೋದಿತ ವಿನ್ಯಾಸ ನಕ್ಷೆಯಲ್ಲಿರುವಂತೆಯೇ ನಿವೇಶನ, ರಸ್ತೆ ನಿರ್ಮಾಣ, ಪಕ್ಕಾ ಗಟಾರು ನಿರ್ಮಾಣ, ವಿದ್ಯುತ್ತೀಕರಣ, ಕುಡಿಯುವ ನೀರು ಸರಬರಾಜು ವ್ಯವಸ್ಥೆ ಹಾಗೂ ಒಳಚರಂಡಿ ಕಾರ್ಯಗಳನ್ನು ವಿನ್ಯಾಸ ಮಾಲೀಕರು ಅಭಿವೃದ್ಧಿಪಡಿಸಿ ಸದರಿ ಅಭಿವೃದ್ಧಿ ಕಾಮಗಾರಿಗಳ ಪೂರ್ಣಗೊಂಡ ಬಗ್ಗೆ ನಗರಾಭಿವದ್ಧಿ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಇಲಾಖೆಗಳಿಂದ ಮುಕ್ತಾಯ ಪ್ರಮಾಣ ಪತ್ರ ಪಡೆದು ಹಾಜರುಪಡಿಸತಕ್ಕದ್ದು ಹಾಗೂ ಈ ಸೌಕರ್ಯಗಳನ್ನು ಮಹಾನಗರ ಪಾಲಿಕೆಗೆ/ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸತಕ್ಕದ್ದು, ಈ ಕಛೇರಿಯ ಪೂರ್ವಾನುಮತಿ ಇಲ್ಲದೇ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.

4) ಅನುಮೋದಿತ ಕರಡು ವಸತಿ ವಿನ್ಯಾಸದಲ್ಲಿರುವ ರಸ್ತೆ, ಸೆಪ್ಟಿಕಟ್ಯಾಂಕ ಹಾಗೂ ಉದ್ಯಾನವನ ನಿಗದಿಪಡಿಸಿರುವ ಜಾಗೆಗಳನ್ನು ಅಭಿವೃದ್ಧಿಪಡಿಸಿ, ಯಾವುದೇ ಪರಿಹಾರ ಕೋರದೆ ಪರಿತ್ಯಾಜನಾ ಪತ್ರದ ಮೂಲಕ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ/ಪಾಲಿಕೆಯ ಹೆಸರಿಗೆ ಹಾಗೂ ನಾಗರೀಕ ಸೌಲಭ್ಯ ಜಾಗೆಯನ್ನು ಆಯುಕ್ತರು ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಇವರ ಹೆಸರಿಗೆ ಯಾವುದೇ ಪರಿಹಾರ ಕೋರದೆ ಪರಿತ್ಯಾಜನಾ ಪತ್ರದ ಮೂಲಕ ನೋಂದಾಯಿಸಿ ಹಸ್ತಾಂತರಿಸಿಕೊಡತಕ್ಕದ್ದು.

Vinyas Final MVB



5) ವಿನ್ಯಾಸದಲ್ಲಿ ಹಾಯ್ದು ಹೋಗುವ ವಿದ್ಯುತ ವಾಹಕಗಳನ್ನು ಹುಬ್ಬಳ್ಳಿ ವಿದ್ಯುತ್ ಸಬರಾಜು ಕಂಪನಿ ಇವರಿಂದ ಹಾಗೂ ದೂರವಾಣಿ ತಂತಿಗಳನ್ನು ಭಾರತ ಸಂಚಾರ ನಿಗಮ ಲಿಮಿಟೆಡ್ ಇವರಿಂದ ಪರವಾನಿಗೆ ಪಡೆದು ರಸ್ತೆ ಪಕ್ಕಕ್ಕೆ ಸ್ಥಳಾಂತರಿಸತಕ್ಕದ್ದು.
6) ವಿನ್ಯಾಸದಲ್ಲಿ ಹಾಯ್ದು ಹೋಗುವ ವಿದ್ಯುತ ವಾಹಕಗಳನ್ನು ಹುಬ್ಬಳ್ಳಿ ವಿದ್ಯುತ್ ಸಬರಾಜು ಕಂಪನಿ ಇವರಿಂದ ಹಾಗೂ ದೂರವಾಣಿ ತಂತಿಗಳನ್ನು ಭಾರತ ಸಂಚಾರ ನಿಗಮ ಲಿಮಿಟೆಡ್ ಇವರಿಂದ ಪರವಾನಿಗೆ ಪಡೆದು ರಸ್ತೆ ಪಕ್ಕಕ್ಕೆ ಸ್ಥಳಾಂತರಿಸತಕ್ಕದ್ದು.
7) ಅಭಿವೃದ್ಧಿ ಕಾಮಗಾರಿಗಳು ಮುಗಿದ ನಂತರ ಸಂಬಂಧಪಟ್ಟ ಇಲಾಖೆ/ಕಛೇರಿಗಳಿಂದ ಮುಕ್ತಾಯ ಪ್ರಮಾಣ ಪತ್ರ ಪಡೆದು ಪ್ರಾಧಿಕಾರಕ್ಕೆ ಹಾಜರಪಡಿಸತಕ್ಕದ್ದು.
8) ನಿಗದಿತ ಮೂರು ವರ್ಷಗಳ ಅವಧಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಮುಕ್ತಾಯ ಪ್ರಮಾಣ ಪತ್ರ ಪಡೆಯದೇ ಇದ್ದಲ್ಲಿ, ನಿವೇಶನಗಳನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.
9) ಸದರಿ ವಿನ್ಯಾಸಕ್ಕೆ ಸರ್ಕಾರದಿಂದ ಕಾಲಕಾಲಕ್ಕೆ ಬರುವ ಸುತ್ತೋಲೆ/ಅಧಿಸೂಚನೆಯ ನಿಯಮಾವಳಿಗಳನ್ನು ಪಾಲಿಸತಕ್ಕದ್ದು
10) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ತಿದ್ದುಪಡಿ ಕಾಯ್ದೆ 17(2) ರನ್ವಯ ಕರಡು ಅನುಮೋದನೆ ನೀಡಲಾಗಿದೆ, ವಿನ್ಯಾಸದ ಅನುಗುಣವಾಗಿ ಅಭಿವೃದ್ಧಿ ಕಾಮಗಾರಿಯನ್ನು ಪೂರ್ಣಗೊಳಿಸಿ ಮುಕ್ತಾಯ ಪ್ರಮಾಣ ಪತ್ರ ಪಡೆದ ನಂತರ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಲಾಗುವುದು. ಅಂತಿಮ ಅನುಮೋದನೆ ನೀಡಿದ ನಂತರ ಸ್ಥಳೀಯ ಸಂಸ್ಥೆ/ಮಹಾನಗರ ಪಾಲಿಕೆಯಿಂದ ಇ-ಸ್ವತ್ತು ಪಡೆದುಕೊಂಡು ನಂತರ ವಿನ್ಯಾಸದಲ್ಲಿನ ನಿವೇಶನಗಳನ್ನು ಪರಬಾರೆ ಮಾಡತಕ್ಕದ್ದು.
11) ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಯು ತಪ್ಪಾಗಿದ್ದಲ್ಲಿ, ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನಾಗಿ ರದ್ದುಗೊಳ್ಳುತ್ತದೆ.
12) ವಿನ್ಯಾಸದ ಮಾಲೀಕರು ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು 2017 ರನ್ವಯ ನೋಂದಾಯಿಸಿಕೊಳ್ಳತಕ್ಕದ್ದು.

ತಮ್ಮ ವಿಶ್ವಾಸಿ.
ಸಹಿ/-
ಆಯುಕ್ತರು
ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ
ಹುಬ್ಬಳ್ಳಿ

ಪ್ರತಿಯನ್ನು:

1) ಪಂಚಾಯತಿ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯಿತ ದೇವರಗುಡಿಹಾಳ ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ
2) ಸಹಾಯಕ ನಿರ್ದೇಶಕರು ಭೂ ದಾಖಲೆಗಳ ಇಲಾಖೆ ಹುಬ್ಬಳ್ಳಿ/ಧಾರವಾಡ ಇವರಿಗೆ ವಿನ್ಯಾಸ ಗಡಿಯನ್ನು ಗುರುತಿಸಿ ಕೆ.ಜೆ.ಪಿ ಶೀಟನ್ನು ತಯಾರಿಸಿ ಪ್ರಾಧಿಕಾರಕ್ಕೆ ಒಂದು ಪ್ರತಿಯನ್ನು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.
3) ಕಾರ್ಯನಿರ್ವಾಹಕ ಅಭಿಯಂತರರು HESCOM, Hubballi/Dharwad ಇವರಿಗೆ ನಿಯಮಾನುಸಾರ ಸೂಕ್ತ ಕ್ರಮಕೈಗೊಳಲು ಸೂಚಿಸಲಾಗಿದೆ.
4) ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ ರಾಜ್ಯ ಇಲಾಖೆ ಇವರಿಗೆ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5) ಕಾರ್ಯನಿರ್ವಾಹಕ ಅಭಿಯಂತರರು, HDUDA, Hubballi ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

ಆಯುಕ್ತರು
ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ
ಹುಬ್ಬಳ್ಳಿ